(6ನೇ ಪುಟದಿಂದ)

ಸೃಷ್ಟಿಸುತ್ತವೆ. ಹೂ ಬಿಟ್ಟ ಹೊಂಗೆ ಮರ ಅಕ್ಷರಶಃ ಮದುವಣಗಿತ್ತಿಯಂತೆ ಶೋಭಿಸುತ್ತದೆ. ಬೀಜದ ಜತೆಗೆ ಹಣ್ಣೆಲೆಗಳು ಉದುರಿ ಚಿಗುರೊಡೆಯುವ ಮಾಘ ಮಾಸದ ಆರಂಭದಲ್ಲಿ ಕಾಣುವ ತಿಳಿಗೆಂಪು ಬಣ್ಣದ ಚಿಗುರು ರಮ್ಯವಾಗಿರುತ್ತದೆ.

ಬೇಸಿಗೆ ಬಿಸಿಲಲ್ಲಿ ಬಳಲಿದವರಿಗೆ ಹೊಂಗೆ ತಂಪು ತಂಪು ನೆರಳು ನೀಡುತ್ತದೆ. ಅದನ್ನು ಮನಗಂಡೇ ನಮ್ಮ ಜನಪದರು 'ಹೊಂಗೆ ನೆಳ್ಳಲ್ಲಿ, ತೊರೆ ಮಳ್ಳಲ್ಲಿ, ಕೆನೆ ಮೊಸರನ್ನ, ಉಂಡು ಮಲಗು ಬಾರಣ್ಣ...' ಎಂದು ಹಾಡಿದ್ದಾರೆ. 'ಹೊಂಗೆ ಹೂವ ತೊಂಗಲಲ್ಲಿ ಭೃಂಗದ ಸಂಗೀತ ಕೇಳಿ....' ಎಂಬ ಕವಿವಾಣಿ ಹೊಂಗೆಯ ಮಹತ್ವಕ್ಕೆ ಕನ್ನಡಿ ಹಿಡಿಯುತ್ತದೆ.

ಹೊಂಗೆಯ ಜೀವ ಶಾಸ್ತ್ರೀಯ ಹೆಸರು ಪೊಂಗೇಮಿಯ ಪಿನ್ನಾಟ. ಹಿಂದೆ ಹೊಂಗೆ ಎಣ್ಣೆಯನ್ನು ಮನೆಗಳಲ್ಲಿ ದೀಪಕ್ಕೆ ಬಳಸಲಾಗುತ್ತಿತ್ತು. ಈಗ ಅದನ್ನೇ ಬಳಸಿ ಜೈವಿಕ ಇಂಧನ ಉತ್ಪಾದಿಸಲಾಗುತ್ತಿದೆ. ಕ್ರಿಮಿನಾಶಕ, ಡಿಟರ್ಜೆಂಟ್‌ಗಳಲ್ಲಿ ಕೂಡ ಈ ಎಣ್ಣೆ ಬಳಕೆಯಲ್ಲಿದೆ. ಹೊಂಗೆ ಹಿಂಡಿ ತೋಟದ ಬೆಳೆಗಳಿಗೆ ಅತ್ಯುತ್ತಮ ಗೊಬ್ಬರ ಮಾತ್ರವಲ್ಲದೆ ಸಸ್ಯಗಳ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಈ ಮರದ ಎಲೆಗಳು ನೀರಾವರಿ ಪ್ರದೇಶದಲ್ಲಿ ಬೆಳೆಯುವ ಭತ್ತ ಇತರ ಬೆಳೆಗೆ ಉತ್ತಮ ಗೊಬ್ಬರವೂ ಹೌದು.





